## ಬೆಳದಿಂಗಳ ಸಂಗೀತ 217

**13 ಅಕ್ಟೋಬರ್ 2019**

**ಗಾಯನ**

**ವಿದ್ವಾನ್ ಅಭಿರಾಮ್ ಬೋಡೆ**

**ವಯೊಲಿನ್**

**ವಿದ್ವಾನ್ ವೈಭವ್ ರಮಣಿ**

**ಮೃದಂಗ**

**ವಿದ್ವಾನ್ ಎ. ರಾಧೇಶ್**

ಫೋನ್: 0821–2548220, 2548221 * ಫ್ಯಾಕ್ಸ್: 0821–2548219

# ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

**ಚಾಮುಂಡಿಬೆಟ್ಟದ ತಪ್ಪಲು, ಮೈಸೂರು**

# ಬೆಳದಿಂಗಳ ಸಂಗೀತ 216

**14 ಸೆಪ್ಟೆಂಬರ್ 2019 * ಶನಿವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಕರ್ನಾಟಕ ಹಿಂದೂಸ್ತಾನಿ ಜುಗಲ್‌ಬಂದಿ



**ವೀಣೆ**

**ವಿದ್ವಾನ್ ಆರ್.ಕೆ. ಪದ್ಮನಾಭ**



**ಹಾರ್ಮೋನಿಯಂ**

**ಡಾ. ರವೀಂದ್ರ ಗುರುರಾಜ್ ಕಾಟೋಟಿ**



**ಮೃದಂಗ**

**ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ**



**ತಬಲ**

**ಪಂ. ಉದಯರಾಜ್ ಕರ್ಪೂರ್**

**ವಿದ್ವಾನ್ ಆರ್.ಕೆ. ಪದ್ಮನಾಭರವರು** ಪ್ರಸಿದ್ಧ ವೀಣಾವಾದಕರು. ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳವರು. ಮೈಸೂರು ಆಸ್ಥಾನ ವಿದ್ವಾನ್ ಆರ್.ಎಸ್. ಕೇಶವಮೂರ್ತಿಯವರ ಸುಪುತ್ರರು. ತಂದೆಯವರ ಬಳಿ ಗಾಯನ ಮತ್ತು ವೀಣಾವಾದನದಲ್ಲಿ ತರಬೇತಿ ಪಡೆದು ಪರಿಣತಿ ಸಾಧಿಸಿದರು. 'ವೈಣಿಕ ರತ್ನ', 'ವೀಣಾ ವಿಶಾರದ' ಕರ್ನಾಟಕ ಪ್ರತಿಭಾವರ್ಧಕ ಅಕಾಡೆಮಿಯ 'ರಾಷ್ಟ್ರ ಚೇತನ', ಬೆಂಗಳೂರು ಗಾಯನ ಸಮಾಜದ 'ವರ್ಷದ ಕಲಾವಿದ' ಪ್ರಶಸ್ತಿ ಸೇರಿದಂತೆ ಹಲವಾರು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರಾದ ಶ್ರೀ ಪದ್ಮನಾಭರವರು ದೂರದರ್ಶನದಲ್ಲೂ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅಮೆರಿಕದ ಪಿಟ್ಸ್‌ಬರ್ಗ್, ಮೆರಿಲ್ಯಾಂಡ್, ವಾಷಿಂಗ್ಟನ್ ಸೇರಿದಂತೆ ವಿಶ್ವಾದ್ಯಂತ ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ ಕಲಾರಸಿಕರಿಗೆ ಸಂಗೀತದೌತಣ ಉಣಬಡಿಸಿದ್ದಾರೆ.

**ಡಾ. ರವೀಂದ್ರ ಗುರುರಾಜ್ ಕಾಟೋಟಿಯವರು** 8ನೇ ವಯಸ್ಸಿನಲ್ಲಿಯೇ ಹಾರ್ಮೋನಿಯಂ ವಾದನದ ವಿದ್ಯಾಭ್ಯಾಸ ಪ್ರಾರಂಭಿಸಿದರು. ಖ್ಯಾತ ಹಾರ್ಮೋನಿಯಂ ವಾದಕ ಪಂ. ರಾಂಭಾವು ಬಿಜಾಪುರೆಯವರ ಶಿಷ್ಯರಲ್ಲೊಬ್ಬರು. ಹಾರ್ಮೋನಿಯಂ ವಾದನದಲ್ಲಿ ಸಾಕಷ್ಟು ಪರಿಣತಿ ಸಾಧಿಸಿದ್ದಾರೆ. ವಿದುಷಿ ಗಂಗೂಬಾಯಿ ಹಾನಗಲ್, ಪಂ. ಭೀಮಸೇನ್ ಜೋಶಿ ಸೇರಿದಂತೆ ಪ್ರಖ್ಯಾತ ಕಲಾವಿದರಿಗೆ ಸಾಥ್ ನೀಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದಿದ್ದಾರೆ. ಬೆಂಗಳೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೇಶ–ವಿದೇಶಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿರುವವರು. ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರು. ಹಲವಾರು ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ವಿದ್ವಾನ್ ಆನೂರು ಅನಂತಕೃಷ್ಣ ಶರ್ಮರು** ಮೃದಂಗ ಮತ್ತು ಘಟಂ ವಾದ್ಯಗಳಲ್ಲಿ ಅಪ್ರತಿಮ ಪ್ರಭುತ್ವವಿರುವ ಅಭಿಜಾತ ಕಲಾವಿದರು. ಪಕ್ಕವಾದ್ಯ ಕಲಾವಿದರಾಗಿ ವಿಶ್ವಾದ್ಯಂತ ನಡೆದ ಪ್ರಮುಖ ಸಂಗೀತಗಾರರ ಕಚೇರಿಗಳಲ್ಲಿ ಭಾಗವಹಿಸಿದ್ದಾರೆ. ಅತ್ಯುತ್ತಮ ಮೃದಂಗ ಕಲಾವಿದ, ಲಯ ಕಲಾ ಪ್ರತಿಭಾಮಣಿ, ಗಾನಕಲಾಶ್ರೀ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಬೆಂಗಳೂರು ಆಕಾಶವಾಣಿಯ ಹಿರಿಯ ಕಲಾವಿದರು.

**ಪಂ. ಉದಯರಾಜ್ ಕರ್ಪೂರ್‌ರವರು** ತಾಯಿಯ ಪ್ರೀತಿ ಮತ್ತು ಒತ್ತಾಸೆಯಿಂದ ತಬಲ ವಾದನದ ಕ್ಷೇತ್ರಕ್ಕೆ ಕಾಲಿರಿಸಿದವರು. ಮುಖ್ಯ ಕಲಾವಿದರ ಔನ್ನತ್ಯಕ್ಕೆ ಹೊಂದುವ ರೀತಿಯಲ್ಲಿ ವಾದ್ಯ ಸಹಕಾರ ನೀಡಬೇಕು ಎನ್ನುವ ವಿನಯವಂತರು. ಖ್ಯಾತ ವಿದ್ವಾಂಸರುಗಳಾದ ಶ್ರೀ ವಿ. ಗಂಗಾಧರ, ಪಂ. ಶೇಷಾದ್ರಿ ಗವಾಯಿ, ಪಂ. ರವೀಂದ್ರ ಯಾವಗಲ್, ಪಂ. ಸುರೇಶ್ ತಲವಾಲಕರ್‌ರವರ ಬಳಿ ಅಧ್ಯಯನ ಮಾಡಿದ್ದಾರೆ.